








ದಿನಾಂಕ: 13-12-2025 ರಂದು ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಬಸವರಾಜ ಹೊರಟ್ಟಿ ಅಭಿನಂದನಾ ಸಮಿತಿ ವತಿಯಿಂದ ಪಕ್ಷಾತೀತವಾಗಿ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿ ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಶಿಕ್ಷಕರ ಕ್ಷೇತ್ರದಿಂದ ದಾಖಲೆಯ ಎಂಟು ಬಾರಿ ಚುನಾವಣೆಯಲ್ಲಿ ಗೆದ್ದು ಇತಿಹಾಸ ನಿರ್ಮಿಸಿರುವ ಬಸವರಾಹ ಹೊರಟ್ಟಿ ಅವರನ್ನು ಪಕ್ಷಾತೀತವಾಗಿ ಸನ್ಮಾಸಿಲಾಯಿತು. ಅಪಾರ ಸಂಖ್ಯೆಯ ಅಭಿಮಾನಿಗಳ ಸಮ್ಮುಖದಲ್ಲಿ ದಾಖಲೆ ನಿರ್ಮಿಸಿದ ಸಭಾಪತಿಯವರಿಗೆ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಕೇಂದ್ರ ಸಚಿವ ಶ್ರಿ ಪ್ರಹ್ಲಾದ್ ಜೋಶಿ ಮತ್ತು ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಗಣ್ಯರು ಆತ್ಮೀಯವಾಗಿ ಸನ್ಮಾನಿಸಿದರು. ಅಭಿಮಾನಿಗಳು ಹೊರಟ್ಟಿ ಅವರನ್ನು ಶಿಕ್ಷಕರ ಕ್ಷೇತ್ರದ ದಂತಕಥೆ ಎಂದು ಕರೆದು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮುಂದಿನ ಎಲೆಕ್ಷನ್‌ಗೆ ಬಸವರಾಜ ಹೊರಟ್ಟಿ ನಿಲ್ತಾರೆ ಎಂದು ಹೇಳಿದಾಗ ಶಿಕ್ಷಕ/ಅಭಿಮಾನಿ ಸಮೂಹ ಒಂಬತ್ತನೇ ಅವಧಿ, ಹೊಡಿ ಒಂಬತ್ ಎಂದು ಘೋಷಣೆ ಕೂಗುತ್ತಿದ್ದರು. ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಎಂಬ ಒತ್ತಾಸೆಯ ಮಾತುಗಳು ಕೇಳಿ ಬಂದವು. ಸಮಾರಂಭದಲ್ಲಿ ಮಾನ್ಯ ಸಚಿವರುಗಳು, ಶಾಸಕರುಗಳು ವಿವಿಧ ಪಕ್ಷಗಳ ಮುಖಂಡರರು, ನಾಯಕರು ಸಾಕ್ಷಿಯಾದರು.